Statement by the Minister for Public Works

Regarding remarks made by a member during the course of Discussion of Demands for grants

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷಣಿಯವರೇ, ಈ ಸದನದ ಮಾನ್ಯ ಸದಸ್ಯರಾದ ಶ್ರೀ ಜೀವರಾಜ್ ಆಳ್ವರವರು ಹೆಚ್.ಯು ಡಿ. ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಯಲ್ಲಿ ಭಾಗವಹಿಸುತ್ತಾ ಒಬ್ಬ ಅಧಿಕಾರಿಯ ವರ್ಗಾವಣೆ ವಿಚಾರದ ಹಿನ್ನೆಲೆಯಲ್ಲಿ ನನ್ನ ಮೇಲೆ ಗುರುತರವಾದ ಆಪಾದನೆಗಳನ್ನು ಮಾಡಿದ್ದಾರೆ. ನನಗೆ ಅತ್ಯಂತ ದುಃಖವಾಗುತ್ತಿದೆ ಈ ರೀತಿ ಆವರು ಸತ್ಯಕ್ಕೆ ದೂರವಾದ ಆಪಾದನೆಗಳನ್ನು ಮಾಡತಕ್ಕ ಮನಸ್ಸಾದರೂ ಹೇಗೆ ಬಂತೋ ? ಎಂದು ಬಹಳ ವೇದನೆಯಿಂದ ಹೇಳಬೇಕಾಗಿದೆ. ಏತಕ್ಕೆಂದರೆ ಯಾರೋ ಕಾರ್ಪೊರೇಷನ್‌ನಲ್ಲಿದ್ದಂಥ ಅಧಿಕಾರಿಯನ್ನು ಏಕಾಏಕಿ ನಾವು ತೆಗೆದುಬಿಟ್ಟಿದ್ದೇವೆಂದು ಹೇಳಿದರು. ಅಧ್ಯಕ್ಷರೇ, ನಾವು ಆ ತರಹ ಮಾಡಿಲ್ಲ. ಆವರು ಹೇಳಿದಂಥ ಮಾತಿನಿಂದ ಅವರು ಒಕ್ಕಲಿಗ ಅಂತ ಅರ್ಥ ಮಾಡಿಕೊಂಡಿದ್ದೇನೆ. ಈಗಲೂ ನನಗೆ ಗೊತ್ತಿಲ್ಲ. ಕಾರ್ಪೊರೇಷನ್ನಿಗೆ ಒಬ್ಬ ಅಧಿಕಾರಿಯನ್ನು ಅಲ್ಲಿಗೆ ನೀವು ಹಾಕಿಕೊಡಬೇಕು ಎಂದು ಕೇಳಿದಾಗ, ಅಲ್ಲಿರ ತಕ್ಕದ್ದು ಒಂದೇ ಪೋಸ್ಟ್. ನಮಗೆ ಇಂಥಾ ಅಧಿಕಾರಿಯನ್ನೇ ಹಾಕಿಕೊಡಿ ಎಂದು ಕೇಳಿದಾಗ ಅಲ್ಲಿದ್ದಂಥ ಒಬ್ಬರನ್ನು ತೆಗೆಯಲೇ ಬೇಕಾಯಿತು. ಇದನ್ನು ಬೇಕಾದರೆ ಶ್ರೀಮಾನ್ ಶ್ರೀಕಂಠಯ್ಯನವರು ಇಲ್ಲಿದ್ದಾರೆ ಅವರು ಬೇಕಾದರೆ ಫೈಲನ್ನು ತರಿಸಿ ನೋಡಲಿ ಅವರಿಗೂ ಅಧಿಕಾರವಿದೆ, ಮುಖ್ಯಮಂತ್ರಿಗಳವರು ಬೇಕಾದರೆ ತೆಗೆದುಕೊಂಡು ನೋಡಲಿ ಅವರಿಗೂ ಅಧಿಕಾರವಿದೆ. ದೇವರ ಸಾಕ್ಷಿಯಾಗಿ ನಾನು ಇದನ್ನು ಹೇಳುತ್ತಿದ್ದೇನೆ. ಇವತ್ತಿನವರೆಗೂ ನಾನು ದೇವರ ಹೆಸರನ್ನು ಎತ್ತಿ ಮಾತನಾಡುವುದಕ್ಕೆ ಹೋಗುವುದಿಲ್ಲ ಆದರೆ ಜನರಿಗೆ ನಂಬಿಕೆ ಬರಬೇಕಲ್ಲಾ, ಏತಕ್ಕೆಂದರೆ ನಾನು ಏನಾದರೂ ಅಧಿಕಾರಿಯನ್ನು ವರ್ಗಾವಣೆ ಮಾಡತಕ್ಕ ವಿಚಾರದಲ್ಲಿ ಸ್ವತಃ ಏನಾದರೂ ನಾನೇ ಇನಿಷಿಯೇಟ್ ಮಾಡಿದ್ದೇನೆಂದು ಹೇಳುವುದಾದರೆ ಅವರು ಹೇಳುವ ಅಪರಾಧ ಶಿಕ್ಷೆಗೆ ಒಪ್ಪುತ್ತೇನೆ. ಅವರು ಹೇಳಿದ್ದಾರೆ.....

> "Recently about 3 months back when I met Sri Kagodu Thimmappa, I had an occasion to talk to him. Sri Kagodu Thimmappa says and let it go on record, that these bloady Vokkaligas who have been in Bangalore for the last 30 years, I drive them away to the farthest corner of the State."

ಇದಕ್ಕಿಂತ ಸತ್ಯಕ್ಕೆ ದೂರವಾದ ವಿಷಯ ಬೇರೆ ಇಲ್ಲ. ಈ ಹುಟ್ಟುಕಥೆಯನ್ನು ಮಾನ್ಯ ಜೀವರಾಜ್

(MR. SPEAKER IN THE CHAIR)

ಆಳ್ವರವರು ಏತಕ್ಕೆ ಹೇಳಿದ್ದಾರೋ ಗೊತ್ತಾಗುತ್ತಿಲ್ಲ. ಇನ್ನು ಮುಂದೆ ಶೋಧನೆ ಮಾಡಬೇಕಾಗಿದೆ, ಏನು ಸಮಾಚಾರವೆಂದು. ೩ ತಿಂಗಳಿಂದ ಇಚೆಗೆ ನಾನು ಅವರನ್ನು ಎಲ್ಲಿ ಭೇಟಿ ಮಾಡಿದ್ದೆ ಈ ಮಧ್ಯದಲ್ಲಿ ಈ ಪ್ರಸಂಗ ಎಲ್ಲಿ ನಡೆಯಿತು ಎನ್ನುವುದು ನನಗೆ ನೆನಪಿಲ್ಲ. ಇದನ್ನು ನಾನು ಪ್ರಮಾಣ ಮಾಡಿ ಹೇಳುತ್ತೇನೆ. ಅಧ್ಯಕ್ಷರೇ. ಈ ಒಂದು ವರ್ಗದ ಅಧಿಕಾರಿಗಳ ಬಗ್ಗೆ ಇಂಥಾ ಮಾತನ್ನು ಆಡಿದ್ದೇನೆಂದು ಹೇಳುವುದಾದರೆ ನಾನು ನಾಲಿಗೆಯನ್ನು ಅದೇ ಕಾಲಕ್ಕೆ ಕತ್ತರಿಸುವುದಕ್ಕೂ ಸಿದ್ಧನಾಗಿದ್ದೇನೆ. ಇವತ್ತು ಈ ರೀತಿ ಆಪಾದನೆ ಮಾಡಿರತಕ್ಕ ಒಬ್ಬರು ನನ್ನ ರಾಜಕೀಯ ಜೀವನಕ್ಕೇ ಇತಿಶ್ರೀ ಮಾಡಬೇಕು ಮತ್ತು ಒಬ್ಬನ ಚಾರಿತ್ರ್ಯ ವಧೆ ಮಾಡಬೇಕು ಎನ್ನತಕ್ಕ ಆತುರದಿಂದ ಕೂಡಿರಬೇಕೇ ವಿನಹಃ ಮತ್ತೆ ಇದರಲ್ಲಿ ಬೇರೆ ಯಾವ ಕಾರಣವೂ ಇರುವುದಕ್ಕೆ ಸಾಧ್ಯವಿಲ್ಲ. ಈಗಲೂ ನಾನು ಹೇಳುತ್ತೇನೆ ನಿಮ್ಮ ಮುಖೇನ ಶ್ರೀ ಆಳ್ವರವರಿಗೆ, ನಾನು ಇವರಿಗೂ ಅವರು ಒಬ್ಬ ಅತ್ಯಂತ ಗುಣವಂತರು, ಯೋಗ್ಯರು ಎಂದು ತಿಳಿದುಕೊಂಡಿದ್ದೇನೆ ಆದರೆ ಈ ಹಂತಕ್ಕೆ ಇಳಿದಿದ್ದಾರೆ ಎಂದರೆ ನನಗೆ ಆಶ್ಚರ್ಯದ ವಿಚಾರ. ಆದುದರಿಂದ ಈಗ ಹೇಳುತ್ತೇನೆ ಇವತ್ತು ಇಂಥಾ ಕೆಲಸದಲ್ಲಿ ಏತಕ್ಕೆ ಪ್ರಯತ್ನ ಪಟ್ಟರೋ ? ಒಬ್ಬ ವ್ಯಕ್ತಿಗೆ ಅಕಸ್ಮಾತ್ ನನ್ನ ಬಗ್ಗೆ ಆಗದೇ ಇರಬಹುದು, ನನ್ನ ಭಾವನೆ ಬಗ್ಗೆ ಆಗದೇ ಇರುವವರನ್ನು ಎತ್ತಿ ಕಟ್ಟುವುದಾಗಲೀ, ಅಥವಾ ಒಬ್ಬ ವರ್ಗವನ್ನೇ ಎತ್ತಿ ಕಟ್ಟುವುದಾಗಲೀ ಯಾರೂ ಮಾಡುವುದಕ್ಕೆ ಹೋಗಬಾರದು. ದುರಾದೃಷ್ಟವಶಾತ್ ಟ್ಟುವಾಗ ನಾನು ಹಿಂದುಳಿದ ವರ್ಗದಲ್ಲಿ ಹುಟ್ಟಿದ್ದೇನೆ. ಅಕಸ್ಮಾತ್ ಶ್ರಮದ ಪ್ರಯತ್ನದಿಂದ ಈ [illegible]ಕ್ಕೆ ಬಂದು ಸೇರಿದ್ದೇನೆ. ನಮಗೆ ಏನು ಅಂಥಾ ದೊಡ್ಡ ರಾಜಕೀಯದ

ಗಂರುಗಳು ಇಲ್ಲ. ಇರುವಂಥಾ ನನ್ನ ಸ್ನೇಹಿತರೇ ಇವತ್ತು ನನಗೆ ಆಶ್ರಯಕೊಟ್ಟು ಮೇಲಕ್ಕೆ ಎತ್ತಿ ಕೊಂಡಿದ್ದಾರೆ. ಆದುದರಿಂದ ನಮಗೆ ಇವರೇ ದಾತರು. ಆದುದರಿಂದ ಇವತ್ತು ನಮ್ಮಂಥವರು ಸ್ವಾಭಾವಿಕವಾಗಿಯೇ ಹಿಂದುಳಿದ ಹರಿಜನರಿಗೆ ಅಲ್ಪಸಂಖ್ಯಾತರಿಗೆ ದುರ್ಬಲ ವರ್ಗದವರಿಗೆ ಸಹಾಯ ಮಾಡಬೇಕೆಂ ಎನ್ನತಕ್ಕ ಕಳಕಳಿ ಇರುತ್ತದೆ. ಆ ವರ್ಗದಿಂದ ಬಂದಿದ್ದೇನೆ, ಒಂದು ದಿವಸ ಇನ್ನೊಬ್ಬರ ಮನೆ ಬಾಗಿಲಿನಲ್ಲಿ ಎಲೆಯನ್ನು ಎತ್ತಿಹಾಕಿ ಎಂಜಲಿನಲ್ಲಿ ತಿಂದಿದ್ದೇನೆ. ಅದಕ್ಕೋಸ್ಕರ ಋಣ ತೀರಿಸ ಬೇಕಾದರೆ ಆ ಸಮಾಜದವರಿಗೆ ಅಧಿಕಾರದಲ್ಲಿದ್ದಾಗ, ಆ ವರ್ಗದವರಿಗೂ ಏನಾದರೂ ಮಾಡಬೇಕು ಎನ್ನತಕ್ಕ ಕಳಕಳಿ ಇರುತ್ತದೆ. ಇನ್ನೊಬ್ಬರನ್ನು ತುಳಿಯಂಬೇಕು ಎನ್ನತಕ್ಕದ್ದನ್ನು ಯಾವ ಸಂದರ್ಭ ದಲ್ಲಿಯೂ ನಾನು ಅಪೇಕ್ಷೆ ಪಟ್ಟಿಲ್ಲ. ಪ್ರಯತ್ನವನ್ನೂ ಮಾಡಿಲ್ಲ ಅಧ್ಯಕ್ಷರೇ. ಆದುದರಿಂದ ಮಾನ್ಯ ಶ್ರೀ ಜೀವರಾಜ್ ಆಳ್ವರವರಲ್ಲಿ ನಿಮ್ಮ ಮುಖೇನ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಇವತ್ತು ಅವರು ಏನು ಆಪಾದನೆ ಮಾಡಿದ್ದಾರೆ ಅದನ್ನು ವಾಪಸ್ ಪಡೆಯಬೇಕೆಂದು ಕೇಳಿಕೊಳ್ಳುತ್ತೇನೆ.

SRI JEEVARAJ ALVA.—Mr. Speaker Sir, I am one of the youngest Legislators. I could say, I am a novice to the legislature. All the same, all though my student days, I have built a tradition. I fought for certain convictions and ideological principles. Sir, at no time, I have made any efforts for character assasination. The records would prove that. I would always confine myself to the specific departments whether it was Education, or Municipal Administration or Health. I never went beyond any of these demands. Most of the legislators used to request me to take part in other aspects also because of my expressing ideas in a flawless language and because of the command over English. I always confine myself to the specific subjects concerning my field of interest. Sir, with deep anguish and regret, I should say I would not have brought this subject at all. I have nothing personal against, Sri Kagodu Thimmappa because our interest don't clash. Neither he belongs to my constituency nor politically we are together. Sir, wherever the Ministers have done commendable job, I have gone out of the way to compliment them. At no time, I have cast any particular character assassination and nothing whatsoever for the last 3-4 years. I participated in every deliberations and today now that Sri Kagodu Thimmappa has denied, one of us should be a lier, here. It was me or him. He even forgets that he had met me some 3 or 4 months ago. I don't remember the date but I remember the occasion of his negative attitude in a cantakerous language showing scant respect to the legislator. I admit with deep regret that it was a fault for having gone to him because of my old association with him as a legislator, to request for the transfer of an Engineer because he happened to be a brother-in-law of the closest friend of mine. That was the only occasion I met him. He has done the work. If I have to go deeper into it, then it will be like.

ಕೊಚ್ಚೆ ಕೆದಕಿದರೆ ಹೆಚ್ಚು ರಾಡಿ ಹಾರುತ್ತದೆ. ಅದನ್ನು ಮಾಡುವುದಕ್ಕೆ ಹೋಗಬೇಡಿ. ನಾನು ದೇವರ ಮೇಲೆ ಪ್ರಮಾಣ ಮಾಡುವುದಿಲ್ಲ. ಅವರು ಈ ಸದನದಲ್ಲಿ ಪ್ರಥಮ ಬಾರಿಗೆ ದೇವರ ಮೇಲೆ ಪ್ರಮಾಣ ಮಾಡಿ ಹೇಳುತ್ತಿದ್ದಾರೆ. ಆದರೆ ನಾನು ಈ ಸದನದ ಗೌರವದ ಮೇಲೆ ಪ್ರಮಾಣ ಮಾಡಿ ಹೇಳುತ್ತೇನೆ. ಅತ್ಯಂತ ಹಿರಿಯರು ಇಲ್ಲಿ ಇದ್ದಾರೆ. ನಾನು ಈ ಸದನದಲ್ಲಿ ಏನೊಂದು ಮಾತುಗಳನ್ನು ಹೇಳಿದ್ದೇನೆ ಆ ಪ್ರತಿಯೊಂದು ಶಬ್ದಗಳನ್ನು ಕೂಡ ಅವರು ಹೇಳಿದ್ದಾರೆ. ಆ ವ್ಯಕ್ತಿಯ ಬಗ್ಗೆ ಹೇಳಬೇಕಾದರೆ 'ಬ್ಲಡಿ ಒಕ್ಕಲಿಗಾಸ್' ಎಂದು ಹೇಳಿದ್ದಾರೆ. ಅವರು ೩೦ ವರ್ಷಗಳಿಂದ ಈ ಬೆಂಗಳೂರಿನಲ್ಲಿ ಬೇರೂರಿದ್ದಾರೆಂದು ಹೇಳಿದ ಮೇಲೆ ಇನ್ನೊಂದು ಮಾತನ್ನು ಏನು ಹೇಳಿದ್ದಾರೆಂದರೆ, ನೀವು ಅವನನ್ನು ಕಾರ್ಪೊರೇಷನ್ ಚುನಾವಣೆಗೆ ನಿಮ್ಮ ಪಾರ್ಟಿಯಿಂದ ನಿಲ್ಲಿಸುತ್ತೀರಾ ಎಂದು ಕೇಳಿದ್ದಾರೆ. ಅದೆಲ್ಲ ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಮಂರೆತೇ ಹೋಗಿದೆ. ಆ ವ್ಯಕ್ತಿ ಹೇಗೆ ಕೆಲಸ ಮಾಡಿದ ಎಂಬುದನ್ನು ಬೇಕಾದರೆ ಈ ಸದನದಲ್ಲಿ ಹೇಳಬಹುದು ; ಅಲ್ಲದೆ, ಆ ವ್ಯಕ್ತಿ ಯಾರು ಎಂಬುದನ್ನು ಬೇಕಾದರೆ ಹೇಳಬಹುದು. ಆದರೆ ಅದನ್ನು ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತಿನ ದಿವಸ, ಜಾತಿ ವಾದವನ್ನು ಹೊಡೆದೋಡಿಸಬೇಕೆನ್ನುತ್ತಿರುವಾಗ ಒಕ್ಕಲಿಗರು, ಲಿಂಗಾಯತರು ಎಂದು ಮಾತನಾಡುತ್ತಾರೆ. ನಾನು ಯಾವ ಜಾತಿಯೆನ್ನು ಕಟ್ಟಿಕೊಂಡಿಲ್ಲ. ನಾನು ಬ್ರಾಹ್ಮಣ ಕನ್ಯೆಯನ್ನು ಮದುವೆಯಾಗಿದ್ದೇನೆ. ನನಗೆ ಜಾತಿ ಇಲ್ಲ. ನಾನು ಜಾತಿ ವಿರೋಧಿ. ನಾನೇನಾದರೂ ಜಾತಿವಾದಿಯಾಗಿದ್ದೇನೆಯೇ ಎಂಬುದನ್ನು ಬೇಕಾದರೆ. ನಾನು ಈ ಸದನದಲ್ಲಿ ಮಾತನಾಡಿರತಕ್ಕ ಭಾಷಣದ ದಾಖಲೆಯಲ್ಲಿ ತೆಗೆದು ನೋಡಲಿ. ಮತ್ತು ಕಾಗೋಡು ತಿಮ್ಮಪ್ಪನವರು ವಿಧಾನ ಸಭೆಯಲ್ಲಿ ಹಿಂದೆ ಮಾತನಾಡಿರತಕ್ಕ ದಾಖಲೆಗಳನ್ನು ತೆಗೆದು ನೋಡಲಿ. ಇವತ್ತು ಅವರು ನನ್ನ ಮೇಲೆ ಗುರುತರವಾದ ಆಪಾದನೆಯನ್ನು ಮಾಡಿದ್ದಾರೆ. ನಾನು ಹೇಳಿದ ಪ್ರತಿಯೊಂದು ಶಬ್ದಗಳನ್ನು ಅವರು ಹೇಳಿರತಕ್ಕದ್ದು ನಿಜ. ಸರ್ಕಾರೀ ಸದಸ್ಯರಿಗೆ ಮತ್ತು ಮಂತ್ರಿಗಳಿಗೆ ಗೊತ್ತಿದೆ ; ನಾನು ಯಾವತ್ತಾದರೂ, ಯಾವುದಾದರೂ ಆಪಾದನೆ ಮಾಡಿದ್ದರೆ (ಮಂತ್ರಿಗಳ ಮೇಲಾಗಲೀ ಅಥವಾ ಸದಸ್ಯರ ಮೇಲಾಗಲಿ) ವಿಧಾನ ಸಭೆಯ ಪ್ರೊಸೀಡಿಂಗ್ಸ್‌ನಲ್ಲಿ ತೆಗೆದು ನೋಡಬಹುದಂ. ಇವತ್ತಿನ ದಿವಸ ನನ್ನ ಮೇಲೆ ಸುಳ್ಳುಗಾರ ಎಂಬ ಆಪಾದನೆಯನ್ನು ಹೊರಿಸಿದ್ದಾರೆ. ಈ ಆಪಾದನೆ ಸರಿಯೇ ತಪ್ಪೇ ಎಂಬುದನ್ನು ನಿರ್ಧರಿಸಲು ವಿಧಾನ ಸಭಾ ಸದಸ್ಯರಿಗೆ ವ.ತ್ತು ನಮ್ಮ ಕರ್ನಾಟಕದ ಜನತೆಗೆ ಬಿಡುತ್ತೇನೆ. ಜೀವರಾಜ ಆಳ್ವ ಸುಳ್ಳುಗಾರನೇ ಅಥವಾ ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಯ ಮಂತ್ರಿಗಳಾದ ಕಾಗೋಡು ತಿಮ್ಮಪ್ಪನವರು ಸುಳ್ಳುಗಾರರೋ ಎಂಬುದನ್ನು ಕರ್ನಾಟಕದ ಜನತೆಯೇ ನಿರ್ಧರಿಸಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ.—ಈ ರಾಜ್ಯದಲ್ಲಿ ಇವರಿಬ್ಬರ ಮಾತು ಕೇಳಿದ ಮೇಲೆ ನಾನೂ ಕೂಡ ಈ ಸಂದರ್ಭದಲ್ಲಿ ಮಾತನಾಡಬೇಕು ಅನ್ನಿಸಿದೆ. ಏಕೆಂದರೆ...

ಶ್ರೀ ಜೆ. ಹೆಚ್. ಪಟೇಲ್.—ನಾನೂ ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಸುಳ್ಳುಗಾರ ಅನ್ನುವ ಪದ ಅನ್‌ಪಾರ್ಲಿಮೆಂಟರಿ. ಆದ್ದರಿಂದ, ಅದನ್ನು ಅವರೂ ಉಪಯೋಗಿಸುವುದು ಬೇಡ, ಮಂತ್ರಿಗಳೂ ಉಪಯೋಗಿಸುವುದು ಬೇಡ.

ಅಧ್ಯಕ್ಷರು.—ಸುಳ್ಳುಗಾರ ಎಂಬ ಶಬ್ದವನ್ನು ಬಳಸಬಾರದೆಂದು ಹೇಳುತ್ತಿದ್ದಾರೆ. ಅದಕ್ಕೆ ಬದಲು ಬೇರೆ ಶಬ್ದ ಬಳಸಿ.

SRI M. C. NANAIAH.—Sir, I am on a point of order. Sir, Rule 293 is very very clear. It says ;

> "A member may, with the permisson of the Speaker make a personal explanation although there is no question before the Assembly, but in this case no debatable matter may be brought forward, and no debatable matter may be brought forward, and no debate shall arise."

There, the discussion should not be allowed on this subject.

MR. SPEAKER.—I am quite aware of this provision. That is why, when the Hon'ble Minister urged to make the statement yesterday, I told him that the concerned Member is not here, and therefore, you can make it tomorrow.

ಶ್ರೀ ಸಿ. ಎಂ. ಇಬ್ರಾಹಿಂ.—ಈ ರಾಜ್ಯದಲ್ಲಿ ಯಾರೂ ಜಾತಿವಾದಿಗಳು ಇಲ್ಲ. ಎಲ್ಲ ಜಾತಿವಾದಿಗಳೇ ಎಂದು ವಿಧಾನ ಸಭೆ ಶುರುವಾದಾಗಿನಿಂದ.....

ಶ್ರೀ ಎ. ಲಕ್ಷ್ಮೀಸಾಗರ್.—ಎಲ್ಲ ಜಾತಿವಾದಿಗಳು ಅಲ್ಲ.

ಶ್ರೀ ಸಿ. ಎಂ. ಇಬ್ರಾಹಿಂ.—ಗಾಂಧಿ ವಾದಿಗಳು ಎಂದು ಹೇಳುತ್ತಿದ್ದೇನೆ. ಅವರು ಏತಕ್ಕೆ ಈ ರಾಜ್ಯದಲ್ಲಿ ಯಾರೂ ಜಾತಿವಾದಿಗಳು ಇಲ್ಲ, ಯಾರೂ ಜಾತಿ ವಾದದಲ್ಲಿ ವಿಶ್ವಾಸ ಇರುವವರು ಇಲ್ಲವೆಂದು ಹೇಳುತ್ತಿದ್ದಾರೆ. ವಿಧಾನ ಸಭೆ ಪ್ರಾರಂಭವಾಗಿ ಲೋಕಸಭೆ ಚುನಾವಣೆ ಆದಮೇಲೆ**

ಅಧ್ಯಕ್ಷರು.—ಈಗ ಆ ಪ್ರಶ್ನೆ ಬೇಡ. ಆಕಸ್ಮಿಕವಾಗಿ ಮಾತನಾಡುವಾಗ ರೆಫರೆನ್ಸ್ ಮಾಡಿದ್ದರಿಂದ ಪರ್ಸನಲ್ ಕ್ಲಾರಿಫಿಕೇಷನ್ ಮಾಡಬೇಕೆಂದು ಮಂತ್ರಿಗಳು ಹೇಳಿದ್ದಾರೆ.

ಶ್ರೀ ಸಿ. ಎಂ. ಇಬ್ರಹಿಂ.—ಬೇಕಾದರೆ ಬಿಟ್ಟು ಬಿಡೋಣ**. ಇಲ್ಲದಿದ್ದರೆ, ಅದನ್ನು ತಡೆಗಟ್ಟುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ ಎನ್ನುವ ಎಚ್ಚರಿಕೆಯನ್ನು ಈ ಸದನದ ಮೂಲಕ ಸಾರ್ವಜನಿಕರಿಗೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಶ್ರೀಮತಿ ರೇಣುಕಾ ರಾಜೇಂದ್ರನ್‌ರವರದ್ದು ಆಯಿತು, ಆಮೇಲೆ ಇಬ್ರಾಹಿಂದು ಆಯಿತು. ನಾನು ಈ ಮಾತನ್ನು ಮನಸ್ಸುನೊಂದು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಮಂತ್ರಿಗಳು ಇಲ್ಲವೆಂದು ಡಿನೈ ಮಾಡಿದ್ದಾರೆ.

Interruptions

SRI M. C. NANAIAH.—Nobody will allow this type of arrogance.

(INTERRUPTIONS)

MR. SPEAKER.—I called the hon. Member Sri M. C. Basappa to speak on the Demand for Grants. Please hear the rules.....

SRI SHEERNALLY M. CHANDRASHEKHAR.—Sir, the Hon. Minister for Public Works has categorically denied the charge made by the hon. Member Sri Jeevaraj Alva. It has to be enquired into.

MR. SPEKRER.—Please substantiats under the rules. Bring a Motion if the rules permit.

ಮಂತ್ರಿಗಳು ಇಲ್ಲವೆಂದು ಡಿನೈ ಮಾಡಿದ್ದಾರೆ. ಈಗ ಬಸಪ್ಪನವರೇ ಮಾತನಾಡಿ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಈಗ ಅವರು ಸೃಷ್ಟೀಕರಣ ನೀಡಿದ್ದಿರೆ, ಈಗ ಅದರ ಆಗತ್ಯವೇನು ?

ಅಧ್ಯಕ್ಷರು.—ನೀವು ಏನು ತೀರ್ಮಾನ ಮಾಡುತ್ತಿದ್ದೀರಿ ?

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಹಾಗಾದರೆ, ಈ ಸದನದಲ್ಲಿ ಯಾರು ಏನು ಬೇಕಾದರೂ ಹೇಳಬಹುದೆ.

ಶ್ರೀ ಸಿ. ಎಂ. ಇಬ್ರಾಹಿಂ.—ಹಿಂದೆ ನಾನು ರಾಜೀನಾಮೆ ಕೊಟ್ಟ ಮೇಲೆ ಎಲ್ಲರೂ ತಣ್ಣಗಾದರು ಇವತ್ತು ಸಿಮೆಂಟ್ ಇಲ್ಲ, ಖಾದಿ ಬೋರ್ಡ್ ಇಲ್ಲ, ವಕ್ಫ್ ಬೋರ್ಡ್ ಇಲ್ಲ. ಯಾವ ವಿಚಾರವೂ ಇಲ್ಲ. ಒಟ್ಟಿನಲ್ಲಿ ನಮ್ಮನ್ನು ಕಳಂಹಿಸಬೇಕಾಗಿತ್ತು. ಅದಕ್ಕೋಸ್ಕರ ಆಪಾದನೆ ಮಾಡಿದರು, ಮುಗಿಯಿತು.

---

* *As ordered by the Chair the remarks are expunged.

ಮುಗಿದ ಮೇಲೆ ಏನೂ ಇಲ್ಲ. ಇವತ್ತು ನಾನು ಕೊಟ್ಟ ರಾಜೀನಾಮೆ ಬಗ್ಗೆ ವಿಚಾರ ಮಾ.e ಇವತ್ತು ಸಿವೆಂಟ್ ಪ್ರಕರಣ ಇಲ್ಲ, ಖಾದಿ ಬೋರ್ಡ್ ಪ್ರಕರಣ ಇಲ್ಲ. ಇದನ್ನೆಲ್ಲ ನೋಡಿದರೆ ನಮಗೆ ಹೊಟ್ಟೆ ಉರಿಯುವುದಿಲ್ಲವೆ ನೀವೆಲ್ಲ ಸಂಘಟಿತರಾಗಿ.....

(ಸಭೆಯಲ್ಲಿ ಗೊಂದಲ)

ಶ್ರೀ ಎಂ. ಸಿ. ನಾನಯ್ಯ.—ನಮಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಅಧ್ಯಕ್ಷರೇ.....

ಅಧ್ಯಕ್ಷರು.—ಮಂತ್ರಿಗಳೇ ಸ್ವತಃ ನಾನು ಹೇಳಿಲ್ಲ ಎಂದು ಹೇಳುತ್ತಾರೆ, ಅವರು ಹೇಳಿದ್ದು ನಿಜ ಎಂದು ಇವರು ಹೇಳುತ್ತಾರೆ. ಆದು ರೆಕಾರ್ಡ್‌ಗೆ ಹೋಗಿದೆ. ಇನ್ನೇನು ಮಾಡುತ್ತೀರಿ ಚಂದ್ರಶೇಖರ್ ಅವರೇ ?

SRI S. M. SHEERNALI CHANDRASEKHAR.—Sir, the Hon. Minister for Public Works has categorically denied the charge made by tho Hon, Member Sri Jeevaraj Alva. It has to be enquired into.

MR. SPEAKER.—Please substantiate your stand under the rules Bring a motion if the rules permit, ರಾತ್ರಿಯೆಲ್ಲಾ ರೂಲ್ಸ್ ಓದಿ ನಾಳೆ ತೆಗೆದು ಕೊಂಡುಬನ್ನಿ.

ಶ್ರೀ ಹೆಚ್. ಟಿ. ಕೃಷ್ಣಪ್ಪ,—ದಯವಮಾಡಿ ನನಗೆ ಎರಡು ನಿಮಿಷ ಅವಕಾಶ ಕೊಡಬೇಕು.

ಅಧ್ಯಕ್ಷರು.—ನಾನು ಹೇಳಿಲ್ಲ ಎಂದು ಹೇಳಿದ್ದಾರೆ. ನೀವೇ ಆಗಲಿ.....

ಶ್ರೀ ಹೆಚ್. ಕೃಷ್ಣಪ್ಪ.—ಕೈಮುಗಿದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಕೈ ಮುಗಿದ ತಕ್ಷಣ ಅವಕಾಶ ಸಿಗುತ್ತದೆಯೇ ? ಅವರು ಹೇಳಿಲ್ಲ ಎಂದು ಹೇಳಿದ ಮೇಲೆ ವಿಷಯ ಮುಗಿಯಿತು. ಇವರು ಹೇಳಿದ್ದಾರೆ ಎಂದು ಹೇಳುತ್ತಾರೆ ಇನ್ನೇನಾದರೂ ಇದ್ದರೆ ಆ ಮಾತು ಬೇರೆ. ಇದು ನಡೆದಿರುವುದು ಅವರ ಚೇಂಬರ್‌ನಲ್ಲಿ ಎಂದು ಹೇಳುತ್ತಿದ್ದಾರೆ. ನಾವೂ ನೋಡಿಲ್ಲ, ನೀವೂ ನೋಡಿಲ್ಲ, ಬೇರೆಯವರೂ ನೋಡಿಲ್ಲ.

SRI S. M. SHEERANALI CHANDRASEKHAR.—He has not said such a thing, in his life. I know it. for 30 years..... . ...

ಡಾ॥ ಹೆಚ್. ಎಲ್. ತಿಮ್ಮೇಗೌಡ.—ಜೀವರಾಜ ಆಳ್ವ ಅವರು ಮಾತನಾಡಿದಮೇಲೆ ಮಾನ್ಯ ಎಂ. ಸಿ, ಬಸಪ್ಪನವರನ್ನು ಮಾತನಾಡಲು ಕರೆಯುವುದರೊಳಗಾಗಿ ಏನೇನು ಆಯಿತೋ ಅದನ್ನು ದಯವಿಟ್ಟು ತಾವು ರೆಕಾರ್ಡ್‌ನಿಂದ ತೆಗೆಸಿ. ಅದನ್ನು ನಡೆವಳಿಕೆಯಿಂದ ತೆಗೆಯುವುದು ಒಳ್ಳೆಯದು.

MR. SPEAKEE.—I did not hear. ಪ್ರೋಸೀಡಿಂಗ್ಸ್‌ನಲ್ಲಿ un-parliamentary or deroga tory ಪದಗಳೇನಾದರೂ ಇದ್ದರೆ ಅದನ್ನು ತೆಗೆಯಬಹುದು.

ಶ್ರೀ ಎ. ಲಕ್ಷ್ಮೀಸಾಗರ್.—ಕೆಲವು ಗುರುತರವಾದ ಆಪಾದನಾರೂಪವಾದ ಮಾತುಗಳನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಇಬ್ರಾಹಿಂ ಅವರು ಹೇಳಿದ್ದಾರೆ. ಅದು ಈ ವಿಷಯಕ್ಕೆ ಸಂಬಂಧ ಪಟ್ಟಿದ್ದಲ್ಲ. ಅವರು ಹೇಳಿದ್ದನ್ನೇ ನಾನು ಮತ್ತೆ ಹೇಳಿಬೇಕು ಎಂದರೆ ಮತ್ತೆ ಅದು ರೆಕಾರ್ಡ್‌ಗೆ ಹೋಗುತ್ತದೆ. ಆದ್ದರಿಂದ ಸಾರಾಂಶ ಹೇಳುತ್ತೇನೆ.

ಅಧ್ಯಕ್ಷರು.—ನಾನು ನಡೆವಳಿಕೆಗಳನ್ನು ತರಿಸಿ ನೋಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ನೀವು ನಾಳೆ ತರಿಸಿನೋಡಿದರೆ ಏನು ಪ್ರಯೋಜನ ? ಪತ್ರಿಕೆಗಳಿಗೆ ಬೋದಮೇಲೆ ತರಿಸಿ ನೋಡಿದರೆ ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಆ ಮಾತುಗಳು ಕಡತಕ್ಕೆ ಹೋಗುವುದಾದರೆ ಅದಕ್ಕೆ ನಾವು ಉತ್ತರ ಕೊಡಲೇಬೇಕಾಗುತ್ತದೆ,

ಅಧ್ಯಕ್ಷರು.—ಈಗಲೇ ತರಿಸುತ್ತೇನೆ. ಇವತ್ತು ಸಭೆ ಮುಗಿಯುವುದರೊಳಗಾಗಿ ತರಿಸಿ ನೋಡುತ್ತೇನೆ.

SRI H. B. DEVEGOWDA.—He has made serious allegations against the Opposition Members.

ಶ್ರೀ ಸಿ. ಎಂ. ಇಬ್ರಾಹಿಂ.—ನಾನು ವಿರೋಧಪಕ್ಷದವರೆಲ್ಲರ ಮೇಲೂ ಆಪಾದನೆ ಮಾಡಲಿಲ್ಲ. ಎಲ್ಲರನ್ನೂ ಏತಕ್ಕೆ ಎಳೆಯುತ್ತೀರಿ ? ನಾನು ಇಡೀ ವಿರೋಧ ಪಕ್ಷದವರ ಮೇಲೆ ಹೇಳಲಿಲ್ಲ.

SRI H. D. DEVEGOWDA.—He has made serious allegations against the Opposition Members, backward class leadership and the minority eadership..... .....

SRI C. M. IBRAHIM.—Only against certain Members and not against all the Opposition Members,

ಅಧ್ಯಕ್ಷರು.—ನಾನು ಈಗಲೇ ತರಿಸುತ್ತೇನೆ. ಇವತ್ತು ಏಳುವುದಕ್ಕಿಂತ ಮುಂಚಿತವಾಗಿ ತರಿಸಿ ತೋರಿಸಿ ತೆಗೆಸತಕ್ಕದ್ದು ಕಂಡುಬಂದರೆ ತೆಗೆಸುತ್ತೇನೆ.

MR. SPEAKER.— Now, Hon'ble Minister for Health and Family Welfare would like to make a statement.

Statement By Minister for Health and Family Planning.

Re: (*i*) *Extension of time for submitting Application Form for admission to M B B S Course.*

SRI A. K. ABDUL SAMAD.— Sir, during the Zero hour today, the Hon'ble Leader of the Opposition and some of the Members have raised the question of postponement of the date for receipt of applications for admission to M.B. B. S. I would like to make the following statement :

" Applications have been called for admission to Ist M. B. B. S. from eligible candidate with P. U. C. and B. Sc. for the year 1982-83 from 19-6-1982. Applications were made available in earlier years in only 4 Government Medical Colleges. Whereas during this year, applications have been made available in the following Medical Colleges,—

Govt. Medical Colleges :

1. Bangalore Medical College, Bangalore
2. Medical College, Mysore
3. Medical College, Bellary
4. Karnataka Medical College, Hubli.